ಶ್ರೀ ಜಗದೀಶ್ ಶೆಟ್ಟರ್ : ಸಿನಿಮಾ ಸೇವಾ ಶುಲ್ಕದ ಬಗ್ಗೆ ಈಗಾಗಲೇ ಚರ್ಚೆ ಆಗುತ್ತಿದೆ. ಮತ್ತೆ ಇವತ್ತು ಸಾಯಂಕಾಲ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ತಿಳಿದು ಬಂದಿದೆ.

ಅಧ್ಯಕ್ಷರು : ಮಾನ್ಯ ಹಂಪನಗೌಡ ಬಾದರ್ಲಿಯವರೇ, ನಿಮಗೆ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಮೊದಲು ಅವಕಾಶ ಕೊಡುತ್ತೇನೆ. ಆ ಸಂದರ್ಭದಲ್ಲಿ ತಾವು ಈ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಹಂಪನಗೌಡ ಬಾದರ್ಲಿ : ತುಂಗಭದ್ರ ಎಡದಂಡೆ ಕಾಲುವೆ ಒಡೆದು ನಮ್ಮ ಜಿಲ್ಲೆಯ ಐದಾರು ಪಟ್ಟಣಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಮತ್ತೆ ರೈತರ ಭೂಮಿಗೂ ಕೂಡ ನೀರಿಲ್ಲದಂತ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು : ಇನ್ನು 26 ಜನ ಮಾತನಾಡುವವರಿದ್ದಾರೆ; ಆದ್ದರಿಂದ ಯಾರಿಗೆ ಕೊಡಲಿ ಅಥವಾ ಯಾರಿಗೆ ಬಿಡಲಿ?

ಶ್ರೀ ಎಸ್.ಸುರೇಶ್‌ಕುಮಾರ್ : ತಾವು ಹೇಳತಕ್ಕಂಥದ್ದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಇದನ್ನು ಮಾಡಬಹುದು.

ಶ್ರೀ ಬಿ.ಸೋಮಶೇಖರ್ : ಒಂದೊಂದು ಪಕ್ಷದವರಿಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಆ) ವಿಷಯ:– ತುಂಗಭದ್ರ ಎಡದಂಡೆ ಕಾಲುವೆ ಒಡೆದು ಉಂಟಾಗಿರುವ ನೀರಿನ ಸಮಸ್ಯೆ ಬಗ್ಗೆ

ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು) : ಮಾನ್ಯ ಅಧ್ಯಕ್ಷರೆ, ತುಂಗಭದ್ರ ಎಡದಂಡೆ ನಾಲೆಯ ಕಾಲುವೆಯು ಗಂಗಾವತಿ ಮತ್ತು ಸಿಂಧನೂರು ಮತ್ತು ಮಾನ್ವಿ ತಾಲ್ಲೂಕುಗಳಲ್ಲಿ ಅಂದರೆ ಒಟ್ಟು ನಾಲ್ಕು ಕಡೆ ಎಡದಂಡೆ ಕಾಲುವೆ ಒಡೆದು ಹೋಗಿದ್ದರಿಂದ ಕುಡಿಯುವ ನೀರಿನ ಸಮಸ್ಯೆ ಮತ್ತು ರೈತರ ಸುಮಾರು 6 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಕಲ್ಪಿಸಿ ಕೊಡುವುದಕ್ಕೆ ತೊಂದರೆ ಆಗಿದೆ. ಈ ಸಂದರ್ಭದಲ್ಲಿ ನಾನು ಭಾರಿ ನೀರಾವರಿ ಸಚಿವರಲ್ಲಿ ಒತ್ತಾಯ ಮಾಡುವುದು ಏನೆಂದರೆ, 15 ದಿವಸದೊಳಗೆ ಎಡದಂಡೆ ಕಾಲುವೆಯನ್ನು ಭದ್ರಗೊಳಿಸುವ ಕೆಲಸವನ್ನು ಕೈಗೆತ್ತಿಕೊಂಡು ತೀವ್ರಗತಿಯಲ್ಲಿ ಸದರಿ ಕೆಲಸವನ್ನು ಮುಗಿಸುವಂಥ ಕೆಲಸ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಸಿಂಧನೂರು ಪಟ್ಟಣಕ್ಕೆ ನಾಲ್ಕೈದು ತಿಂಗಳ ಕಾಲ ಕುಡಿಯುವ ನೀರನ್ನು ಸ್ಟೋರೇಜ್ ಮಾಡತಕ್ಕಂಥ ವ್ಯವಸ್ಥೆ ಇದೆ. ಇದಕ್ಕೆ ಎಡದಂಡೆ ಕಾಲುವೆಯ ಮೂಲಕವೇ ನೀರು ಬರಬೇಕಾಗುತ್ತದೆ. ಬೇರೆ ಯಾವ ಕಡೆಯಿಂದಲೂ ಕೂಡ ನೀರು ಸಿಗುವುದಿಲ್ಲ. ಮತ್ತೆ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿದರೂ ಕೂಡ ಸಿಹಿ ನೀರು ಸಿಗುವುದಿಲ್ಲ. ಮತ್ತೆ ಹಳ್ಳದಲ್ಲಿಯೂ ಕೂಡ ನೀರಿಲ್ಲ. ಒಂದು ಲಕ್ಷ ಜನಸಂಖ್ಯೆ ಇರತಕ್ಕಂಥ ಮಾನ್ವಿ, ಸಿಂಧನೂರು, ಗಂಗಾವತಿ ಮತ್ತು ರಾಯಚೂರು ತಾಲ್ಲೂಕುಗಳ ಜನರಿಗೆ ಕುಡಿಯುವ ನೀರಿನ ತೊಂದೆ ಆಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಕ್ಕೆ ನನಗೂ ಕೂಡ ಅವಕಾಶ ಕೊಡಬೇಕು.

ಅಧ್ಯಕ್ಷರು : ಈ ವಿಷಯದ ಬಗ್ಗೆ ಮಾತನಾಡುತ್ತೇನೆಂದು ತಾವು ನನಗೆ ಬರೆದು ತಿಳಿಸಿಲ್ಲ. ಆದ್ದರಿಂದ ತಾವು ಮಾತನಾಡುವುದಕ್ಕೆ ಹೋಗಬೇಡಿ. ಅಂಥ ಸನ್ನಿವೇಶ ಇದ್ದರೆ ಮೊದಲೇ ನನಗೆ ಬರವಣಿಗೆಯ ಮೂಲಕ ತಿಳಿಸಬೇಕಾಗಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕೊಪ್ಪಳ ಜಿಲ್ಲೆಯ ಉಸ್ತುವಾರಿ ಸಚಿವರು ಇಲ್ಲಿಯೇ ಇದ್ದಾರೆ. ಅವರು ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಾರೆ. ಆದ್ದರಿಂದ, ಅವರು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮೊದಲು ನಾವು ಮಾತನಾಡುವುದಕ್ಕೆ ಅವಕಾಶ ಕೊಡಿ. ಅನಂತರ ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಅಧ್ಯಕ್ಷರು : ನಿಮ್ಮ ಜಿಲ್ಲಾ ಮಂತ್ರಿಯವರು ಉತ್ತರ ಕೊಡುತ್ತಾರೆ. ಅಲ್ಲಿ ಕೇವಲ ರಿಪೇರಿ ಕೆಲಸ ಆಗಬೇಕಷ್ಟೆ ತಾನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತುಂಗಭದ್ರ ಎಡದಂಡೆ ಕಾಲುವೆ ಗಂಗಾವತಿಯಲ್ಲಿ ಒಡೆದಿರತಕ್ಕಂಥದ್ದು ನಿಜ. ನಾನೂ ಕೂಡ ಸ್ಥಳಕ್ಕೆ ಹೋಗಿ ನೋಡಿದ್ದೇನೆ. ಈಗಾಗಲೇ ಅಲ್ಲಿ ಕೆಲಸ ಪ್ರಾರಂಭ ಆಗಿದೆ. ಇವತ್ತು ಅಥವಾ ನಾಳೆಯೊಳಗೆ ಸದರಿ ಕೆಲಸ ಪೂರ್ಣಗೊಳ್ಳುತ್ತದೆ. ಕುಡಿಯುವ ನೀರನ್ನು ಬಿಡುತ್ತೇವೆಂದು ನಾವೇನು ಮೊನ್ನೆ ದಿವಸ ನಡೆದಂಥ ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿದ್ದೆವೋ ಅದರ ಪ್ರಕಾರ ನಾಳೆಯಿಂದ 30 ನೇ ತಾರೀಖಿನವರೆಗೆ ಕುಡಿಯುವ ನೀರಿಗೋಸ್ಕರ ನೀರನ್ನು ಬಿಡುತ್ತೇವೆ. ಆದರೆ, ಮುಂದಿನ ಬೆಳೆಗೋಸ್ಕರ ಯಾವ ರೀತಿಯಲ್ಲಿ ನೀರನ್ನು ಬಿಡಬೇಕೆಂಬುದರ ಬಗ್ಗೆ ಬೆಂಗಳೂರಿನಲ್ಲಿ ಸಭೆ ಕರೆದು ಸವಿಸ್ತಾರವಾಗಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ. ಮಾನ್ಯ ಸದಸ್ಯರೂ ಕೂಡ ಆ ಒಂದು ಸಮಿತಿಯ ಸದಸ್ಯರಾಗಿದ್ದಾರೆ. ಆದರೆ ಮೊನ್ನೆ ನಡೆದ ಸಭೆಗೆ ಅವರು ಬಂದಿರಲಿಲ್ಲ. ಆದರೆ, ಸರ್ಕಾರ ಮಾತ್ರ ಏನು ಒಳ್ಳೆಯದು ಆಗಬೇಕೆಂದು ಯೋಜನೆ ಹಾಕಿಕೊಂಡಿದೆಯೋ ಅದನ್ನು ಖಂಡಿತ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಕಾಲುವೆಯಲ್ಲಿ ನೀರನ್ನು ಬಿಟ್ಟರೆ ಮತ್ತೆ ಕಾಲುವೆ ಒಡೆಯತಕ್ಕಂಥ ಸಂದರ್ಭ ಇದೆ.

Mr. Speaker : No supplimentaries and no cross questions in Zero Hour. You please take your seat Mr. Karadi Sanganna. ತಾವು ದಯವಿಟ್ಟು ಕುಳಿತುಕೊಳ್ಳಿ.

ಇ) ವಿಷಯ:– ಚಿತ್ರಮಂದಿರಗಳ ಸೇವಾಶುಲ್ಕದ ಬಗ್ಗೆ

†**ಶ್ರೀ ಶಿವಾನಂದ ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನಾನು ಒಂದು ಸಣ್ಣ ವಿಷಯವನ್ನು ಮಾನ್ಯ ಹಿರಿಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಇವತ್ತಿನ ದಿವಸ ಈ ವಿಷಯ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದಲ್ಲಿರತಕ್ಕಂಥ ಚಿತ್ರಮಂದಿರಗಳ ಸೇವಾ ಶುಲ್ಕದ ಬಗ್ಗೆ ಒಂದು ತೀರ್ಮಾನ ಇವತ್ತು ತೆಗೆದುಕೊಳ್ಳುತ್ತೀರಿ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಚಿತ್ರ ಮಂದಿರದ ಮಾಲೀಕರೂ ಕೂಡ ತಮ್ಮ ಅಳಲನ್ನು ತಮ್ಮ ಜೊತೆ ತೋಡಿಕೊಂಡಿದ್ದಾರೆ. ಇವತ್ತಿನದಿವಸ ಕೇಬಲ್ ಟಿ.ವಿ., ಸಿ.ಡಿ., ಮತ್ತು ಆಡಿಯೋ, ವಿಡಿಯೋ ಬಂದ ಮೇಲೆ ಚಿತ್ರ ಮಂದಿರಗಳ ಮಾಲೀಕರಿಗೆ ಅನೇಕ ತೊಂದರೆಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ಅವರೂ ಒಂದು ಮನವಿ ಪತ್ರವನ್ನು ತಮಗೆ ಕೊಟ್ಟಿದ್ದಾರೆ. ಹಾಗೆಯೇ, ತಾವೂ ಕೂಡ ಒಂದು ಸಭೆ ಮಾಡಿದ್ದೀರಿ. ಆದ್ದರಿಂದ, ಅವರ ವಿಚಾರ ಏನಿದೆ ಅದರ